**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1220/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಜಯರಾಮ್ | ಫ್ರಾಸಾ-1 |
| ತಂದೆಯ ಹೆಸರು | : ಬಾಬು | ಚಾಸಾ-1 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 09.07.2025 |
| ವಾಸಸ್ಥಳ | : ಅಂಬೇಡ್ಕರ್ ನಗರ, ಕುನ್ನಹಳ್ಳಿ, | |

**:ಮುಖ್ಯ ವಿಚಾರಣೆ ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-2 ರಿಂದ 4 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ದಿ.27.05.2024 ರ ದೂರು, ಪ್ರ.ವ.ವರದಿ ಮತ್ತು ಸ್ಥಳ ಮಹಜರ್ ನಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ಎರಡು ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ದೂರನ್ನು ನಿಪಿ-1, ಪ್ರ.ವ.ವರದಿಯನ್ನು ನಿಪಿ-2, ಸ್ಥಳ ಮಹಜರ್ ನ್ನು ನಿಪಿ-3, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ), ಪೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

ಸಾಕ್ಷಿಯು ದಿ.29.05.2024 ಮತ್ತು ದಿ.27.05.2024 ರ ವಸ್ತು ಬಿಡುಗಡೆ ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, 7 ಪೋಟೋಗಳಲ್ಲಿ ಕಾಣುವ ನಗದು ಹಣ ಮತ್ತು ಓಲೆ ತಮ್ಮದು ಎಂದು ಗುರುತಿಸಿ ಅದನ್ನು ಪೋಲಿಸರು ಪಡೆದು ವಾಪಸ್ಸು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಮಹಜರ್ ಗಳನ್ನು ನಿಪಿ-8 ಮತ್ತು 9, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 9(ಎ), ಪೋಟೋಗಳನ್ನು ನಿಪಿ-10 ರಿಂದ 16 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಬೀಗ ಮತ್ತು ರಾಡ್ ನ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

1 ವರ್ಷದ ಹಿಂದೆ ಪೋಲಿಸರು ನನ್ನ ಮನೆಯ ಬಳಿ ಬಂದು ಸಹಿಗಳನ್ನು ಪಡೆದು ಮನೆಯಲ್ಲಿ ಇದ್ದ ನಗದು ಹಣ ಮತ್ತು ಚಿನ್ನದ ಓಲೆಯನ್ನು ಪಡೆದುಕೊಂಡು ಪೋಲಿಸ್ ಠಾಣೆಗೆ ಬರುವಂತೆ ತಿಳಿಸಿ ಪೋಟೋಗಳನ್ನು ತೆಗೆದು ನಂತರ ಪೋಲಿಸ್ ಠಾಣೆಗೆ ಹೋದಾಗ ಪುನಃ ನನ್ನ ಸಹಿಗಳನ್ನು ಪಡೆದು ಪೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ನನ್ನ ಸಹಿಗಳನ್ನು ಪಡೆದು, ಪೋಟೋಗಳನ್ನು ತೆಗೆದಿದ್ದಾರೆ ಎಂದು ಹಾಗೂ ಓಲೆ ಮತ್ತು ನಗದು ಹಣವನ್ನು ಯಾವ ಕಾರಣಕ್ಕಾಗಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಸ್ತುಗಳು ಕಳ್ಳತನವಾಗಿದೆ ಎಂದು ನಾನು ಪೋಲಿಸರಿಗೆ ದೂರು ಕೊಟ್ಟು ಯಾವುದೇ ಸ್ಥಳ ತೋರಿಸಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ಸಾಕ್ಷಿಗೆ ನಿಪಿ-1, 3, 8 ಮತ್ತು 9 ರಲ್ಲಿನ ದಾಖಲೆಗಳಲ್ಲಿನ ಸಂಪೂರ್ಣ ವಿವರವನ್ನು ಓದಿ ಹೇಳಿದ್ದು ಆ ವಿವರಗಳನ್ನು ಸಾಕ್ಷಿಯು ಸಂಪೂರ್ಣವಾಗಿ ಅಲ್ಲಗಳೆಯುತ್ತಾರೆ. ನಾನು ಆರೋಪಿಯ ವಿರುದ್ಧ ದೂರು ದಾಖಲಿಸಿ ಪೋಲಿಸರಿಗೆ ಕೃತ್ಯ ನಡೆದ ಸ್ಥಳ ತೋರಿಸಿ ನ್ಯಾಯಾಲಯದ ಮುಂದೆ ನೋಡುತ್ತಿರುವ ಬೀಗ ಮತ್ತು ರಾಡ್ ನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.</u>**
**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.